## ಎಲಿಗೆಂಟ್ ಲುಕ್!



ಓಪನ್ ಹೇರ್ ನೋಡಿ ನೋಡಿ ಜನರಿಗೆ ಬೇಜಾರು ಬಂದಿದೆ. ಹಾಗೂ ಹರಡಿದ ಕೂದಲನ್ನು ನಿರ್ವಹಿಸುವುದು ಕಷ್ಟ. ಹೀಗಾಗಿ ಇಂದಿನ ಮಹಿಳೆಯರು ಹೇರ್ ಬನ್ ಮೊರೆ ಹೋಗುತ್ತಿದ್ದಾರೆ. ಫ್ಯಾಷನ್ ಲೋಕದ ಮಾಡೆಲ್ ಇರಲಿ, ಸಿನಿ ತಾರೆಯರೇ ಇರಲಿ ಅಥವಾ ಜನಸಾಮಾನ್ಯರೇ ಇರಲಿ ಎಲ್ಲರಿಗೂ ಹೇರ್‌ಬನ್ ಕೇಶವಿನ್ಯಾಸ ಸರಳ ಎನಿಸಿದೆ. ಜೊತೆಗೆ ಕ್ಲಾಸಿ ಆಗಿ ಎಲಿಗೆಂಟ್ ಲುಕ್ ಅನ್ನು ಸರಳ ವಿಧಾನದಲ್ಲಿ ನೀಡುವುದೇ ಇದರ ವಿಶೇಷ.

ಹೇರ್‌ಬನ್‌ನಲ್ಲಿ ಸಾಕಷ್ಟು ವೆರೈಟಿ ಬಂದಿದೆ. ನೆಟೆಡ್ ಬನ್ ಕೂಡ ಚಾಲ್ತಿಯಲ್ಲಿದೆ. ಮೊದಲೆಲ್ಲ ಪ್ಲೇನ್ ಬನ್‌ಗೆ ಮಲ್ಲಿಗೆ ಹೂವು ಮುಡಿಸುತ್ತಿದ್ದರು. ಈಗ ಹೂವಿನ ವೈವಿಧ್ಯಕ್ಕೇನು ಕಮ್ಮಿ ಇಲ್ಲ. ಅವರ ದಿರಿಸಿಗೆ ಮ್ಯಾಚ್ ಆಗುವ ಬಣ್ಣದ ಹೂವಿನಿಂದ ಸಿಂಗರಿಸಿಕೊಳ್ಳಲು ಇಷ್ಟ ಪಡುತ್ತಾರೆ.

ತುರುಬು ಕಟ್ಟಿದರೆ ವಯಸ್ಸಾದ ಲುಕ್ ಬರುತ್ತದೆ ಎಂದುಕೊಳ್ಳುವವರು ಅನೇಕ. ಹೀಗಾಗಿ ಅದನ್ನು ಟ್ರೆಂಡಿಯಾಗಿಸೋಕೆ ಮಾರುಕಟ್ಟೆಯಲ್ಲಿ ಬಗೆಬಗೆಯ ಆಕ್ಸೆಸರೀಸ್‌ಗಳು, ಹೂವುಗಳು, ಹೂವಿನ ಮಾಲೆ, ಬೀಡ್ಸ್‌ಗಳು ಬಂದಿವೆ. ಎಲ್ಲಕ್ಕಿಂತ ಮುಖ್ಯವಾಗಿ ಬನ್ ನಿರ್ವಹಣೆ ಬಹಳ ಸುಲಭ. ಥಟ್ಟನೆ ಆಗುತ್ತದೆ. ಮುಡಿ ಹಾಕುವುದಕ್ಕೂ ಸುಲಭ. ನೀಟ್ ಲುಕ್ ಸಿಗುತ್ತದೆ. ದಿನವಿಡೀ ಕೂದಲನ್ನು ನಿರ್ವಹಿಸುವ ಜಂಜಾಟ ಇರುವುದಿಲ್ಲ.

–ಮಂಜುನಾಥ್ ಎನ್., ಸೆಲೆಬ್ರಿಟಿ ಮೇಕಪ್ ಆರ್ಟಿಸ್ಟ್

## ಹೇರ್‌ಬನ್ ಇತಿಹಾಸ

ಈ ಕೇಶವಿನ್ಯಾಸಕ್ಕೆ ಅತ್ಯಂತ ಹಳೆಯದಾದ ಇತಿಹಾಸವಿದೆ. ಮನುಷ್ಯ ಕಂಡುಕೊಂಡ ಮೊದಲ ಕೇಶವಿನ್ಯಾಸ ಇದು ಎಂದೂ ಹೇಳಲಾಗುತ್ತದೆ. ಕ್ರಿ.ಪೂ. 5ನೇ ಶತಮಾನದಲ್ಲಿದ್ದ ಬುದ್ಧ ಸಹ ಕೂದಲನ್ನು ತುರುಬಿನ ರೀತಿಯಲ್ಲಿ ಕಟ್ಟುತ್ತಿದ್ದ ಎಂಬುದನ್ನು ಚಿತ್ರಗಳಲ್ಲಿ ಕಾಣಬಹುದು. ಗ್ರೀಕ್ ಯುಗದಲ್ಲಿ, ಚೀನಾ, ಕೊರಿಯಾಗಳಲ್ಲಿ ಕೂಡ ಕೂದಲನ್ನು ಮೇಲಕ್ಕೆತ್ತಿ ತುರುಬಿನ ರೀತಿಯಲ್ಲಿ ಕಟ್ಟುತ್ತಿದ್ದರು ಎಂಬ ದಾಖಲೆಗಳಿವೆ. ಜಪಾನ್‌ನಲ್ಲಿ ಡಬಲ್ ಬನ್ ಪರಿಕಲ್ಪನೆ ಹೆಚ್ಚಾಗಿದ್ದು ಇದಕ್ಕೆ 'ಒಡಂಗೊ' ಎನ್ನುವ ಹೆಸರೂ ಚಾಲ್ತಿಯಲ್ಲಿದೆ. ಇಂದಿನ ಆಧುನಿಕ ಯುಗದಲ್ಲಿಯೂ ಉದ್ದ ಕೂದಲು ಬಿಡುವ ಪುರುಷರ ನೆಚ್ಚಿನ ಕೇಶವಿನ್ಯಾಸ ಈ ಹೇರ್‌ಬನ್ನೇ ಆಗಿದೆ.

ಹೆಂಗಳೆಯರ ಮುಡಿ ಸಿಂಗರಿಸಲು ಹೂವು ಬೇಕೇ ಬೇಕು. ಬಗೆಬಗೆಯ ಹೂವಿನ ಮಾಲೆ ಅಥವಾ ಹೂವಿನ ಎಸಳುಗಳಿಂದ ತುರುಬನ್ನು ಸಂಪೂರ್ಣವಾಗಿ ಸಿಂಗರಿಸುವುದು ಈಗ ಟ್ರೆಂಡ್. ಸೀರೆಗೆ ಮ್ಯಾಚ್ ಆಗುವ ಬಣ್ಣಬಣ್ಣದ ಹೂವುಗಳನ್ನು ಬಳಸಿ ಸಿಂಗರಿಸಲಾಗುತ್ತದೆ. ನೈಜ ಹೂವನ್ನು ಬಳಸಿ ವಿನ್ಯಾಸ ವೈವಿಧ್ಯ ಮೆರೆಯಬಹುದು, ಅಥವಾ ಮಾರುಕಟ್ಟೆಯಲ್ಲಿ ಕೃತಕ ಹೂವುಗಳಿಂದ ಅಲಂಕೃತಗೊಂಡ ನೂರಾರು ಬಗೆಯ ಹೇರ್‌ಬನ್‌ಗಳು ಲಭ್ಯವಿವೆ. ಅವುಗಳು ಕೂಡ ಉತ್ತಮ ಆಯ್ಕೆ.



### ಉದ್ದ ಕೂದಲಿಗೆ ಬನ್

ಫ್ಯಾಷನ್ ಪ್ರಿಯರಿಗೆ ಉದ್ದ ಕೂದಲು ವರದಾನವೇ ಸರಿ. ಕೂದಲು ಉದ್ದವಾಗಿದ್ದರೆ ಎಂಥ ಕೇಶವಿನ್ಯಾಸವನ್ನೂ ಕೂಡ ಸುಲಭವಾಗಿ ಮಾಡಿಕೊಳ್ಳಬಹುದು. ಅದರಲ್ಲೂ ಉದ್ದ ಕೂದಲಿದ್ದರೆ ತುರುಬು ಕಟ್ಟುವುದು ಸುಲಭ. ಮುಡಿ ದೊಡ್ಡದಾಗಿ ಕಾಣುವುದಕ್ಕಾಗಿ ಯಾವುದೇ ಕೃತಕ ಬನ್‌ಗಳ ಮೊರೆ ಹೋಗಬೇಕೆಂದಿಲ್ಲ. ಕೃತಕ ಬನ್ ಧರಿಸಿ ಭಾರವಾಯ್ತು, ಬಿದ್ದು ಹೋಗಬಹುದು ಎನ್ನುವ ಚಿಂತೆ ಇರುವುದಿಲ್ಲ. ಮುಡಿ ಕಟ್ಟಿ ಒಂದಷ್ಟು ಹೇರ್‌ಪಿನ್‌ನಿಂದ ಅದನ್ನು ಬಿಗಿಯಾಗಿಸಿ ಹೂವುಗಳಿಂದ ಸಿಂಗರಿಸಿ ಕೊಳ್ಳಬಹುದು. ಮುಂಭಾಗದಲ್ಲಿ ಪಫ್ ಕೇಶವಿನ್ಯಾಸ ಮಾಡಿ ಕೊಂಡರೆ ನಿಮ್ಮ ಚೆಲುವು ದುಪ್ಪಟ್ಟಾಗುತ್ತದೆ.

### ಗಿಡ್ಡ ಕೂದಲಿಗೆ ಬನ್

ಕೂದಲು ಉದ್ದವಿದ್ದರಷ್ಟೇ ಮುಡಿ ಕಟ್ಟಬೇಕು ಎನ್ನುವ ಕಾಲ ಈಗಿಲ್ಲ. ಮುಂಭಾಗದಲ್ಲಿ ಹೈ ಪಫ್ ಅಥವಾ ಒಂದು ಕಡೆಗಷ್ಟೇ ಜಡೆ ಹೆಣೆದು ಸರಳವಾದ ಮುಡಿ ಕಟ್ಟಬೇಕು. ಮುಡಿ ದೊಡ್ಡದಾಗಿ ಕಾಣಬೇಕೆಂದರೆ ಕೃತಕ ಬನ್ ಕೂಡ ಬಳಸಿಕೊಳ್ಳಬಹುದು. ಜೊತೆಗೆ ಸರಳವಾಗಿ ಮಲ್ಲಿಗೆ ಮಾಲೆ ಮುಡಿದರೂ ಆದೀತು. ಅಥವಾ ಗುಲಾಬಿ ಹೂವಿನಿಂದ ಸಿಂಗರಿಸಿಕೊಳ್ಳಿ.

### ಜ್ಯುವೆಲ್ಲರಿ ಬನ್

ತುರುಬು ಕಟ್ಟಿದಾಗಲೆಲ್ಲ ಹೂವಿನಿಂದಲೇ ಸಿಂಗರಿಸಿಕೊಳ್ಳಬೇಕೆಂದಿಲ್ಲ. ಕಿವಿಗೆ, ಕೈಗೆ, ಕಾಲಿಗೆ ವಿವಿಧ ಬಗೆಯ ಆಭರಣ ಇರುವಂತೆ ಮುಡಿಯನ್ನು ಸಿಂಗರಿಸುವುದಕ್ಕಾಗಿಯೂ ತರಹೇವಾರಿ ಆಭರಣಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ನಿಮ್ಮ ದಿರಿಸಿಗೆ ಹಾಗೂ ನಿಮಗೊಪ್ಪುವ ವಿನ್ಯಾಸದ ಆಭರಣದಿಂದ ಮುಡಿಯನ್ನು ಸಿಂಗರಿಸಿಕೊಳ್ಳಬಹುದು. ಜೊತೆಯಲ್ಲಿ ಹೂವಿನ ಮಾಲೆಯೂ ಇದ್ದರೆ ಆಕರ್ಷಕವಾಗಿರುತ್ತದೆ.

### ಮೆಸ್ಸಿ ಬನ್

ಮದುವೆ ಹುಡುಗಿ ಹೆಚ್ಚು ಇಷ್ಟ ಪಡುವ ಹೇರ್‌ಸ್ಟೈಲ್ ಇದು. ಚದುರಿದಂತೆ ಕಾಣುವ ಈ ಕೇಶವಿನ್ಯಾಸ ಹಲವರಿಗೆ ಅಚ್ಚುಮೆಚ್ಚು. ಕೂದಲು ದಟ್ಟವಾಗಿ ಇರುವಂತೆ ಕಾಣುವುದಲ್ಲದೆ ಚೆಂದದ ಲುಕ್ ನೀಡುತ್ತದೆ. ಮೆಸ್ಸಿ ಕೇಶವಿನ್ಯಾಸದಲ್ಲೂ ನಾನಾ ವಿಧಗಳಿದ್ದು ಮೇಕಪ್‌ನೊಂದಿಗೆ ಮದುಮಗಳಿಗೆ ವಿಶೇಷ ಹೊಳಪನ್ನು ತಂದುಕೊಡುತ್ತದೆ. ಮೆಸ್ಸಿ ಬನ್ ಶೈಲಿಯ ಕೇಶವಿನ್ಯಾಸ ಮಾಡಿ ಆಕರ್ಷಕ ಆಂಟಿಕ್ ಜ್ಯುವೆಲ್ಲರಿಯಿಂದ ಸಿಂಗರಿಸಲು ಮರೆಯಬಾರದು.

### ಬೀಡ್ಸ್ ಬನ್

ಕೂದಲು ಹೆಣೆಯುವುದರಲ್ಲಿ ನಾನಾ ರೀತಿ ಇರುವುದು ಎಲ್ಲರಿಗೂ ಗೊತ್ತೇ ಇದೆ. ವಿವಿಧ ರೀತಿಯಲ್ಲಿ ಜಡೆ ಹೆಣೆದು ಅದರಿಂದಲೇ ಮುಡಿ ಕಟ್ಟುವುದೂ ಈಗಿನ ಟ್ರೆಂಡ್. ನಿಮ್ಮ ಮೊಗಕ್ಕೆ ಹೊಂದಿಕೆಯಾಗುವ ರೀತಿಯಲ್ಲಿ ಜಡೆ ಹೆಣೆದು ಅದನ್ನು ಮುಡಿಯ ರೀತಿಯಲ್ಲಿ ವಿನ್ಯಾಸಗೊಳಿಸಲಾಗುತ್ತದೆ. ಅದಕ್ಕೆ ಮಲ್ಲಿಗೆ ಹೂವಿನಿಂದ ಅಥವಾ ಬೀಡ್ಸ್‌ಗಳಿಂದ ಸಿಂಗರಿಸ ಬಹುದು.

ಅವರವರ ಕ್ರಿಯಾಶೀಲತೆಗೆ ತಕ್ಕಂತೆ ವಿನ್ಯಾಸ ಮೂಡಿಬರುತ್ತದೆ. ಮುಖದ ಆಕಾರ ಕ್ಕನುಗುಣವಾಗಿ ಹೈಬನ್, ಲೋಬನ್ ಅಥವಾ ಮಿಡಲ್ ಬನ್ ಸೂಕ್ತವೇ ಎಂದು ನೋಡಿ ಕೊಳ್ಳಬೇಕಾಗುತ್ತದೆ. ಹಿಂಭಾಗದಲ್ಲಿ ಮುಡಿ ಕಟ್ಟಿ ಸಿಂಗರಿಸಿಕೊಂಡಾಗ ಮುಂಭಾಗದಿಂದ ನಿಮ್ಮ ಮುಖಕ್ಕೆ ಒಪ್ಪುವ ರೀತಿಯಲ್ಲಿ ಕೇಶವಿನ್ಯಾಸ ಮಾಡಿಕೊಳ್ಳಿ. ■